ನಾನ್-ಫೀಜಿಬಲ್ ಆಗುತ್ತದೆ. ಅಲ್ಲಿ ವರ್ಷಕ್ಕೆ ಒಟ್ಟು ಕೇಸ್ ರಿಜಿಸ್ಟರ್ ಆಗತಕ್ಕಂಥದ್ದು 60. ಹೀಗಿರುವಾಗ ಎರಡು ಪೊಲೀಸ್ ಸ್ಟೇಷನ್‌ಗಳ ಅವಶ್ಯಕತೆಯಿಲ್ಲ. ಮಾಂಜ್ರಾ ನದಿ ಅಡ್ಡ ಇರುವುದರಿಂದ ಅನೇಕ ಜನರಿಗೆ ಈ ಹುಲುಸೂರು ಪೊಲೀಸ್ ಸ್ಟೇಷನ್‌ಗೆ ಬರುವುದಕ್ಕೆ ಆಗುವುದಿಲ್ಲ, ಈ ಮೆಹಕರ್ ಸರ್ಕಲ್‌ನಲ್ಲಿರುವ 24 ಹಳ್ಳಿಯ ಜನರಿಗೆ ಬರುವುದಕ್ಕೆ ಆಗುವುದಿಲ್ಲ. ಇದಕ್ಕಾಗಿ ನಾನು ಸಂಬಂಧಪಟ್ಟ ಪಿಡಬ್ಲ್ಯೂಡಿ ಮಿನಿಸ್ಟರ್‌ರವರಿಗೆ ಒಂದು ಪತ್ರ ಬರೆದು ಅವರಿಗೆ ಒಂದು ಬ್ರಿಡ್ಜ್ ಮಾಡಿಕೊಡಬೇಕು ಎಂದು ಹೇಳಿದ್ದೇನೆ. 24 ಕಿಲೋಮೀಟರ್‌ನಲ್ಲಿಯೇ ಈ ಪೊಲೀಸ್ ಸ್ಟೇಷನ್ ಇರುವುದರಿಂದ ನಾವು ಆ ಎಕ್ಸ್‌ಪೆಂಡಿಚರ್ ಅನ್ನು ಅವಾಯ್ಡ್ ಮಾಡಬಹುದು ಮತ್ತು 24 ಹಳ್ಳಿಗಳಿಗೆ ಒಂದು ಪೊಲೀಸ್ ಸ್ಟೇಷನ್ ತೆರೆಯುವಂಥದ್ದು ಸಾಧ್ಯವಾಗುವುದಿಲ್ಲ. ಕ್ರೈಂ ರೇಟ್ ಹಾಗೂ ಎಲ್ಲದನ್ನೂ ನೋಡಿದಾಗ ಇದು ಸಾಧ್ಯವಾಗುವುದಿಲ್ಲ, ಜೊತೆಗೆ ಇದು ಎಲ್ಲಾ ಸೇರಿ 12 ಕಿಲೋಮೀಟರ್ ವ್ಯಾಪ್ತಿಯಲ್ಲಿ ಬರುವ ಪೊಲೀಸ್ ಸ್ಟೇಷನ್. ಅದಕ್ಕಾಗಿ ನಾನು ಮಾನ್ಯ ಪಿಡಬ್ಲ್ಯೂಡಿ ಸಚಿವರಿಗೆ ಪತ್ರ ಬರೆದು ಯಾವುದೇ ರೀತಿಯಲ್ಲಿ ಆ ಬ್ರಿಡ್ಜ್ ಅನ್ನು ಮಾಡಿಕೊಟ್ಟರೆ ಜನರಿಗೆ ಅನುಕೂಲವಾಗುತ್ತದೆ ಮತ್ತು ಮಳೆಗಾಲದಲ್ಲೂ ಕೂಡ ಜನರಿಗೆ ಪೊಲೀಸ್ ಸ್ಟೇಷನ್‌ಗೆ ಬಂದು ಹೋಗಲಿಕ್ಕೆ ಅನುಕೂಲವಾಗುತ್ತದೆ ಎಂದು ಹೇಳಿದ್ದೇನೆ. ಪ್ರತಿ ವರ್ಷ ನಾವು ಒಂದು ಪೊಲೀಸ್ ಸ್ಟೇಷನ್ ತೆರೆದರೆ ಈಗಾಗಲೇ ಹೇಳಿದ ಹಾಗೆ 40 ಲಕ್ಷ ರೂಪಾಯಿ ಖರ್ಚಾಗುತ್ತದೆ. ಆದರೆ ಬ್ರಿಡ್ಜ್ ಮಾಡಿದರೆ ಸುಮಾರು ಒಂದರಿಂದ ಒಂದೂವರೆ ಕೋಟಿ ರೂಪಾಯಿ ಆಗಬಹುದು. ಇದನ್ನು ಮಾಡಬೇಕೆಂದು ನಾನು ಈಗಾಗಲೇ ಪತ್ರ ಬರೆದಿದ್ದೇನೆ, ಈ ಬಗ್ಗೆ ಅವರು ಕೂಡ ಪರ್‌ಸ್ಯೂ ಮಾಡಿದರೆ ಅದು ಬೇಗನೆ ಆಗುವುದರ ಜೊತೆಗೆ ಸಮಸ್ಯೆ ಕೂಡ ಬಗೆಹರಿಯುತ್ತದೆ. ಪೊಲೀಸ್ ಔಟ್‌ಪೋಸ್ಟ್ ಬಗ್ಗೆ ನಾನು ಹೇಳಿದ್ದೇನೆ, ಈಗಾಗಲೇ ಡಿಸಿಪಿ ಅವರಿಂದ ಒಂದು ಪ್ರಸ್ತಾವನೆ ಬಂದಿದೆ. ನಾನು ಅದನ್ನು ಆರ್ಥಿಕ ಇಲಾಖೆಗೆ ಕಳುಹಿಸಿ, ಔಟ್‌ಪೋಸ್ಟ್ ಮಾಡುವುದಕ್ಕೆ ಬೇಕಾದರೆ ಪ್ರಯತ್ನ ಮಾಡುತ್ತೇನೆ.

ಲಿಂಗಸಗೂರು ತಾಲ್ಲೂಕಿನ ಮುದಗಲ್‌ನಲ್ಲಿ ಕುಡಿಯುವ ನೀರಿನ ಅಭಾವ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 11(43)

ಸದಸ್ಯರ ಹೆಸರು: ಶ್ರೀ ಹಸನಸಾಬ್ ನಬೀಸಾಬ್ ಧೋತಿಹಾಳ್(ಕುಷ್ಟಗಿ)

ಉತ್ತರಿಸುವವರು: ಶ್ರೀ ಎಸ್.ಎಂ.ಕೃಷ್ಣ(ಮುಖ್ಯಮಂತ್ರಿಯವರು)

ಪ್ರಶ್ನೆ

1. ರಾಯಚೂರು ಜಿಲ್ಲೆ ಲಿಂಗಸುಗೂರು ತಾಲ್ಲೂಕಿನ ಮುದಗಲ್‌ನಲ್ಲಿ ಕುಡಿಯುವ ನೀರಿನ ತೀವ್ರ ಅಭಾವ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2. ಕುಡಿಯುವ ನೀರಿನ ಸಮಸ್ಯೆಯನ್ನು ಪರಿಹರಿಸಲು ಸರ್ಕಾರ ಕ್ರಮ ತೆಗೆದುಕೊಳ್ಳುವುದೇ, ಆಗಿದ್ದಲ್ಲಿ ಕುಡಿಯುವ ನೀರನ್ನು ಎಂದಿನಿಂದ ಪೂರೈಸಲಾಗುವುದು?

ಉತ್ತರ

1. ಬಂದಿದೆ.

2. ಹೌದು, ಮುದಗಲ್ ಪಟ್ಟಣದ ಕುಡಿಯುವ ನೀರಿನ ಸಮಸ್ಯೆಯನ್ನು ಪರಿಹರಿಸಲು ಕೃಷ್ಣಾ ನದಿಯನ್ನು ಜಲ ಮೂಲವನ್ನಾಗಿ ಪರಿಗಣಿಸಿ ರೂ.841.00 ಲಕ್ಷಗಳಿಗೆ ಒಂದು ಅಂದಾಜನ್ನು ತಯಾರಿಸಿ ಕೇಂದ್ರ ಪುರಸ್ಕೃತ ತ್ವರಿತ ನಗರ ನೀರು ಸರಬರಾಜು ಕಾರ್ಯ ಕ್ರಮದಡಿಯಲ್ಲಿ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದ್ದು, ಕೇಂದ್ರ ಸರ್ಕಾರದ ತಾಂತ್ರಿಕ ಮಂಜೂರಾತಿ ನಂತರ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು.

ಶ್ರೀ ಹಸನಸಾಬ್ ನಬೀಸಾಬ್ ಧೋತಿಹಾಳ್: ಮಾನ್ಯ ಅಧ್ಯಕ್ಷರೆ, ಇವತ್ತಿನ ದಿವಸಗಳಲ್ಲಿ ಕುಡಿಯುವ ನೀರಿನ ಅನೇಕ ಯೋಜನೆಗಳಲ್ಲಿ ನೀರು ಕೊಡುವುದಕ್ಕೆ ಆಗಿಲ್ಲ, ಆದರೂ ಸನ್ಮಾನ್ಯ ಮುಖ್ಯಮಂತ್ರಿಗಳ ಉತ್ತರದಲ್ಲಿ ಕೃಷ್ಣಾ ನದಿಯಿಂದ ನೀರು ಕೊಡುತ್ತೇವೆಂದು ಹೇಳತಕ್ಕಂಥದ್ದು ಮಾಡಿರುವುದರಿಂದ ಅವರಿಗೆ ತುಂಬಾ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಈ ಮುದುಗಲ್ ಪಟ್ಟಣದಲ್ಲಿ ಕುಡಿಯುವ ನೀರಿನ ತೊಂದರೆ ಬಹಳ ಇದೆ. ತೀವ್ರಗತಿಯಲ್ಲಿ ಆ ಕೆಲಸವನ್ನು ಕೈಗೊಳ್ಳಬೇಕೆಂದು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್.ಎಂ.ಕೃಷ್ಣ: ಮಾನ್ಯ ಅಧ್ಯಕ್ಷರೆ, ಈ ಯೋಜನೆಯನ್ನು ನಾವು ಕೇಂದ್ರ ಸರ್ಕಾರದ ಒಪ್ಪಿಗೆಗಾಗಿ ಕಳುಹಿಸಲಾಗಿದ್ದು, ಕೇಂದ್ರ ಸರ್ಕಾರದ ಒಪ್ಪಿಗೆ ದೊರೆತ ನಂತರ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು 50:50 ಪರ್ಸೆಂಟ್ ಗ್ರಾಂಟ್ ಮೂಲಕ ಈ ಕುಡಿಯುವ ನೀರಿನ ಯೋಜನೆಯನ್ನು ಕಾರ್ಯರೂಪಕ್ಕೆ ತರಲಿಕ್ಕೆ ಪ್ರಯತ್ನಿಸುತ್ತೇನೆ.

ಅಧ್ಯಕ್ಷರು: ಮಾನ್ಯ ಹನುಮೇಗೌಡರ ಪ್ರಶ್ನೆ ನಗರಾಭಿವೃದ್ಧಿ ಇಲಾಖೆಯಿಂದ ವಸತಿ ಇಲಾಖೆಗೆ ವರ್ಗಾವಣೆಯಾಗಿದೆ. ಆದ್ದರಿಂದ, ತಮ್ಮ ಪ್ರಶ್ನೆಯನ್ನು ಮುಂದಿನವಾರ ತೆಗೆದುಕೊಳ್ಳುತ್ತೇನೆ.